

ತೊಗೊಂಡು ವಗದೇನಿ. ಎಲ್ಲಿ ಬೇಕ ಅಲ್ಲೆ ಇರಬಹುದು... ಹ್ಞಾಂ... ಆರಾಮಾಗ್ಲಿಕ್ಕತ್ತೇನಿ. ಮೈಥಿಲಿಗೆ ಪುರುಸೊತ್ತ ಇಲ್ಲಾ. ಎಲ್ಲಾರ ಕಡೆ ಫೋನ್ ಮಾಡಸ್ತಾಳ. ಅವರೂ ಮಾಡತಾರ ಹುಚ್ಚರ ಗತೆ..." ಎಂದ ವ್ಯಂಗ್ಯ ನಗುವಿನೊಂದಿಗೆ. ಕೆನ್ನೆಗೆ ಬಾರಿಸಿದಂತಾಗಿ ಇದು ಬೇಕಿತ್ತೇ ನನಗೆ ಎಂದುಕೊಂಡೆ.

ಮುಂದೆ ಕೆಲವೇ ದಿನಗಳಲ್ಲಿ ಮೈಥಿಲಿಯ ಫೋನ್ ಬಂದಿತ್ತು. "ಥ್ಯಾಂಕ್ಸ್" ಹೇಳುತ್ತ, "ನೀ ಮಾತಾಡಿದ್ದರಿಂದ ಫರಕು ಬಿತ್ತು. ಆರಾಮಾಗಿ ಮನಿಗೆ ಬಂದಾರ" ಎಂದಿದ್ದರು. ನನ್ನ ಮಕ್ಕಳ ವಿಷಯ ಕೇಳಿದಾಗ ಪ್ರತೀಕ ಎಂ.ಟೆಕ್. ಮುಗಿಸಿ ಮೈಕ್ರೊಸಾಫ್ಟ್‌ನಲ್ಲಿ ಕೆಲಸಕ್ಕೆ ಸೇರಿದ ಬಗ್ಗೆ, ಮಗಳು ಮೆಡಿಕಲ್ ಓದುತ್ತಿರುವ ಬಗ್ಗೆ ತಿಳಿಸಿದ್ದೆ. ಕೆಲವು ತಿಂಗಳುಗಳು ಕಳೆದಿದ್ದವು. ಒಂದು ಸಂಜೆ... ಶ್ರೀನಾಥ ಮನೆಯಲ್ಲಿರುವಾಗಲೇ ವಸುಮತಿ ಹುಡುಕಿಕೊಂಡು ಬಂದಿದ್ದಳು. ಉಭಯಕುಶಲೋಪರಿಯ ಮಾತುಕತೆಗಳಾದ ಮೇಲೆ, "ಚಂದ್ರು ಮತ್ತ ಮೈಥಿಲಿ ಮಗಳ್ನ ನಿನ್ನ ಮಗ್ಗ ಕೊಡಬೇಕಂತ ಭಾಳ ಆಶಾ ಪಡ್ಲಿಕ್ಕತ್ತಾರ. ಅದಕ್ಕ ನನಗ ಅಡ್ರೆಸ್ ಕೊಟ್ಟು, 'ಸ್ವತಃ ಹೋಗಿ ಕುಂಡಲಿ ಕೊಟ್ಟು ಮಾತಾಡಿ ಬರ್ರಿ. ವಾಟ್ಸಾಪ್ ಮ್ಯಾಲೆ ಕಳಸೋದು ಬ್ಯಾಡ' ಅಂತ ಕಳಸ್ಯಾರ. ಸ್ನಿಗ್ಧಾ ಥೇಟ್ ಚಂದ್ರುನಗತೇನ ನೋಡು. ರೂಪ... ಗುಣ ಎಲ್ಲಾ ಹಂಗ. ಚಂದ್ರು ಬೇಕಾದಷ್ಟು ಆಸ್ತಿ ಮಾಡ್ಯಾನ. ಎಲ್ಲಾ ಮಗಳಿಗೇ... ಕುಂಡಲಿ ನೋಡೋದು ಬಿಡೋದು ನಿಮ್ಮ ಇಚ್ಛಾ. ನೋಡದಿದ್ದರೂ ನಡಿತದಂತ. ನೋಡಿದ್ರ... ಕೂಡಿದ್ರ... ತಿಳಸ್ರಿ" ಎಂದು ಹೇಳಿ ಹೋದಳು. ನನಗೆ ಕನ್ಯಾರ್ಥಿಯಾಗಿ ಅವಳೇ ಬಂದ ಹಳೆಯ ನೆನಪು ಮರುಕಳಿಸಿತ್ತು. ಅವಳನ್ನು ಗೇಟಿನ ವರೆಗೆ ಬೀಳ್ಕೊಟ್ಟು ಒಳಗೆ ಬಂದಾಗ ಶ್ರೀನಾಥ ಧಾರವಾಡ ಪಂಚಾಂಗ ಹಿಡಿದು ಕುಳಿತಿದ್ದರು. "ಕುಂಡಲಿ ಛೊಲೊ ಕೂಡಿ ಬರ್ತದ ಪುಷ್ಪಾ... ತಿಳಿಸಬಹುದು" ಎಂದರು. ಆ ಜಾತಕ ಕೈಗೆತ್ತಿಕೊಂಡು "ಬ್ಯಾಡ್ರಿ... ಈ ಕುಂಡಲಿ ಕೂಡುದುಲ್ಲ" ಎಂದವಳೇ ಅದನ್ನು ಪರಪರನೇ ಹರಿದು ಹಾಕಿದೆ. ಸ್ಪರ್ಧೆಗೆ ಬಿದ್ದು ಗುದ್ದಾಡುವ ನೆಂಟಸ್ತಿಕೆ ಬೇಡವೆನಿಸಿತು. "ಕರೊನಾದ ಸರಣಿ ತುಂಡು ಮಾಡಬೇಕಂದ್ರ ಬಂದಾವ್ರಿಂದ ಧೂರ ಇದ್ದು ಸೋಷಿಯಲ್ ಡಿಸ್ಟನ್ಸಿಂಗ್ ಮೆಂಟೇನ್ ಮಾಡಬೇಕು. ಇಲ್ಲೂ ಹಂಗ... ಅವರ ಸಹವಾಸಾನೇ ಬ್ಯಾಡಾ. ಧೂರ ಇದ್ದು ಬ್ಯಾರೇ ನೋಡೋಣು. ಯಾಕಂದ್ರ ಈರ್ಷಾ ಅನ್ನೋದು ಕರೊನಾಕ್ಕಿಂತ ಧೊಡ್ಡ ರೋಗ" ಎಂದೆ. ಅವರು ಅಚ್ಚರಿಯಿಂದ ನೋಡುತ್ತಿದ್ದಂತೆ ಕೈಗೆ ಸಾಬೂನು ಉಜ್ಜಿ ಸ್ವಚ್ಛವಾಗಿ ತೊಳೆದು ನಿರಾಳವಾದೆ.


## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್‌ಎಲ್‌ಬಿ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...', 'ಆಕ್ರಮಣ' ಅವರ ಪ್ರಕಟಿತ ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.